# ಅದಿತಿ ಕಾರ್ ವಾರ್ಮಿಂಗ್

■ ವಿಶಾಖ ಎನ್.



ರಾಜ ಮನೆತನದ ಹುಡುಗಿ ಎನಿಸಿಕೊಂಡಿರುವ ಅದಿತಿ ರಾವ್ ಹೈದರಿ ಇತ್ತೀಚೆಗೆ ಆಡಿ ಕ್ಯೂ 7 ಎಸ್‌ಯುವಿ ಖರೀದಿಸಿದರು. ಈ ಕಾರಿನ ಬೆಲೆ ಒಂದು ಕೋಟಿ ರೂಪಾಯಿಗೂ ಹೆಚ್ಚು.

ಕೋವಿಡ್ ಕಾಲದಲ್ಲಿ ಎಷ್ಟೋ ದೊಡ್ಡ ನಟ–ನಟಿಯರು ಕೆಲಸದಿಂದ ಬ್ರೇಕ್ ತೆಗೆದುಕೊಂಡಿದ್ದರೆ, ಅದಿತಿ ಆಗಲೂ ಕೈ ತುಂಬಾ ಕೆಲಸ ಇಟ್ಟುಕೊಂಡಿದ್ದವರು. ಮಲಯಾಳಂನ 'ಸೂಫಿಯುಂ ಸುಜಾತಯುಂ' ತರಹದ ಅಪರೂಪದ ಸಿನಿಮಾದಲ್ಲಿನ ಅಭಿನಯದಿಂದ ಛಾಪು ಮೂಡಿಸಿದ ಅದಿತಿ ಕಳೆದ ವರ್ಷ ನೆಟ್‌ಫ್ಲಿಕ್ಸ್‌ನಲ್ಲಿ ತೆರೆಕಂಡ 'ದಿ ಗರ್ಲ್ ಆನ್ ದಿ ಟ್ರೇನ್', 'ಅಜೀಬ್ ದಾಸ್ತಾನ್ಸ್' ಹಾಗೂ 'ಸರ್ದಾರ್ ಕಾ ಗ್ರ್ಯಾಂಡ್‌ಸನ್' ಚಿತ್ರಗಳಲ್ಲೂ ನಟಿಸಿದ್ದರು. ಇದೇ ವರ್ಷ ಬಿಡುಗಡೆಯಾದ ತಮಿಳಿನ 'ಹೇ ಸಿನಾಮಿಕಾ' ಸಿನಿಮಾದಲ್ಲಿ ದುಲ್ಕರ್ ಸಲ್ಮಾನ್‌ಗೆ ಜೋಡಿಯಾಗಿ ಅಭಿನಯಿಸಿದರು.

ವಿಕ್ರಮಾದಿತ್ಯ ಮೋಟ್ವಾನೆ ಅವರ ವೆಬ್ ಸೀರೀಸ್ 'ಜುಬಿಲಿ'ಯಲ್ಲಿ ಕೂಡ ಅದಿತಿ ನಟಿಸುತ್ತಿದ್ದಾರೆ. ಇದು ಅವರು ಒಪ್ಪಿಕೊಂಡಿರುವ ಮೊದಲ ವೆಬ್ ಸೀರೀಸ್. ಅಮೆಜಾನ್ ಪ್ರೈಮ್‌ನಲ್ಲಿ ತೆರೆಕಾಣಲಿರುವ ಈ ಸರಣಿಯು ಬಾಲಿವುಡ್‌ನ ಕಥಾನಕವನ್ನೇ ಒಳಗೊಂಡಿರುವುದು ವಿಶೇಷ.

ಹಲವು ಭಾಷೆಗಳಲ್ಲಿ ನಟಿಸುತ್ತಾ, ಹೊಸತಿಗೆ ಒಡ್ಡಿಕೊಳ್ಳುತ್ತಿರುವ ಅದಿತಿ ಹೊಸ ಕಾರನ್ನು ಕೊಂಡಿದ್ದರಲ್ಲಿ ಒಂದು ವಿಶೇಷವಿದೆ. ಅದೀಗ ನಟಿಯರ ಮೆಚ್ಚಿನ ಕಾರ್ ಎನಿಸಿಕೊಂಡಿದೆ. ಶಾನ್ಯಾ ಕಪೂರ್, ತೇಜಸ್ವಿ ಪ್ರಕಾಶ್ ಹಾಗೂ ನಮ್ಮ ಕ್ರಿಕೆಟಿಗ ಕೆ.ಎಲ್. ರಾಹುಲ್ ಮನದನ್ನೆ ಆಥಿಯಾ ಶೆಟ್ಟಿ ಇದೇ ಕಾರನ್ನು ಕೊಂಡಿಕೊಂಡಿದ್ದರು. ಮುಂಬೈ ವೆಸ್ಟ್‌ನ ಆಡಿ ಶೋರೂಂನಿಂದ ಈ ಕಾರನ್ನು ಒಯ್ಯಲು ಅದಿತಿ ಖುದ್ದು ಹಾಜರಿದ್ದರು. ಆಡಿ ಕಂಪನಿಯವರು ಅವರ ಪೋಸ್ಟರ್ ಅನ್ನೂ ನಿಲ್ಲಿಸಿ, ಉಡುಗೊರೆಗಳನ್ನೂ ಶುಭಕೋರಿದರು. ನೀಡಿದರು. ಆ ಫೋಟೊಗಳನ್ನು ಪ್ರಚಾರಕ್ಕೂ ಬಳಸಿಕೊಂಡರು. ■



# ಮತ್ತೆ ಬಣ್ಣ ಹಚ್ಚಲಿದ್ದಾರೆ ಅನುಷ್ಕಾ

ಕೋನ ವೆಂಕಟ್ ಹಾಗೂ ಹೇಮಂತ್ ಮಧುಕರ್ ಅವರ 'ನಿಶ್ಶಬ್ದಂ' ತೆಲುಗು ಸಿನಿಮಾ ಅಷ್ಟಾಗಿ ಗಮನಸೆಳೆಯಲಿಲ್ಲ. ಅನುಷ್ಕಾ ಶೆಟ್ಟಿ ಸಿನಿಮಾ ವೃತ್ತಿಬದುಕು ಮುಗಿಯುತ್ತಾ ಬಂದಿತೇನೋ ಎಂದು ಅನೇಕರು ಆಗ ಅಂದುಕೊಂಡರು. ಆದರೆ, ಈ ನಟಿ ಮತ್ತೆ ಬಣ್ಣಹಚ್ಚಿ ಹೊಸ ಪ್ರಯೋಗಕ್ಕೆ ಕೈಹಾಕಿದ್ದಾರೆ.

2020ರಲ್ಲಿ 'ನಿಶ್ಶಬ್ದಂ' ತೆಲುಗು ಸಿನಿಮಾ ಬಿಡುಗಡೆಯಾದದ್ದು. ಅದಕ್ಕೂ ಮೊದಲು 2018ರಲ್ಲಿ 'ಭಾಗಮತಿ', 2019ರಲ್ಲಿ 'ಸೈ. ರಾ. ನರಸಿಂಹರೆಡ್ಡಿ' ಚಿತ್ರಗಳಲ್ಲಿ ಅನುಷ್ಕಾ ನಟಿಸಿದ್ದರು. 'ಬಾಹುಬಲಿ' ಎರಡೂ ಭಾಗಗಳ ಸಿನಿಮಾಗಳ ನಂತರ ಅವರಿಗೆ ಹೆಚ್ಚು ಅಭಿನಯವಕಾಶ ಸಲ್ಲಲಿಲ್ಲ. ಈಗ ನವೀನ್ ಪೊಲಿಶೆಟ್ಟಿ ಸಹನಟನಾಗಿರುವ ಇನ್ನೂ ಶೀರ್ಷಿಕೆ ಇಡದ ಚಿತ್ರಕ್ಕೆ ಅನುಷ್ಕಾ ಸಹಿ ಹಾಕಿದ್ದಾರೆ. ಮಹೇಶ್ ಬಾಬು ಪಾಚಿಗೊಲ್ಲ ಇದನ್ನು ನಿರ್ದೇಶಿಸುವರು. 'ಜಾತಿ ರತ್ನಾಲು' ಚಿತ್ರದ ಮೂಲಕ ನವೀನ್ ಪೊಲಿಶೆಟ್ಟಿ ಸಂಚಲನ ಮೂಡಿಸಿದ್ದರು. ಆಮೇಲೆ ಹಿಂದಿಯ 'ಛಿಚೋರೆ' ಚಿತ್ರದಲ್ಲೂ ಅಭಿನಯಿಸಿ ಜನಮನ ಗೆದ್ದರು. ಅವರೊಟ್ಟಿಗೆ ನಟಿಸಲು ಅನುಷ್ಕಾ ಒಪ್ಪಿರುವುದು ಪ್ರಯೋಗಮುಖಿ ನಿರ್ಧಾರ.

ಅನುಷ್ಕಾ ಶೆಟ್ಟಿ ವೃತ್ತಿಬದುಕಿಗೆ ಹೊಸ ತಿರುವನ್ನು ತಂದುಕೊಟ್ಟವರು ನಿರ್ದೇಶಕ ರಾಜಮೌಳಿ. 'ವಿಕ್ರಮಾರ್ಕುಡು' ಚಿತ್ರದಲ್ಲಿ ಈ ನಟಿಯ ಪಾತ್ರಪೋಷಣೆಗೆ ಹಾಗೂ ಅಭಿನಯಕ್ಕೆ ಜನಮೆಚ್ಚುಗೆ ವ್ಯಕ್ತವಾಗಿತ್ತು. 'ಸ್ಟಾಲಿನ್', 'ಲಕ್ಷ್ಯಂ', 'ಅರುಂಧತಿ' ಸಿನಿಮಾಗಳಲ್ಲಿನ ನಟನಾ ಸಾಮರ್ಥ್ಯದಿಂದ ಅವರ ಹಾಗೂ ಪ್ರಭಾಸ್ ಇಬ್ಬರ ನಡುವೆ ಪ್ರೇಮ ಮೊಳೆತಿದೆ ಎನ್ನುವ ಸುದ್ದಿ ಇತ್ತು.

ಮೂರು ವರ್ಷಗಳಿಂದ ಹೊಸ ಚಿತ್ರಕ್ಕೆ ಸಹಿ ಹಾಕಿರದೇ ಇದ್ದ ಅವರೀಗ ಅಡುಗೆ ಮಾಡುವವಳ ಪಾತ್ರವನ್ನು ಒಪ್ಪಿಕೊಂಡಿದ್ದಾರೆ. ಈ ಚಿತ್ರದ ಹೂರಣವೇನು ಎನ್ನುವುದನ್ನು ನಿರ್ದೇಶಕರು ಗುಟ್ಟಾಗಿಯೇ ಇಟ್ಟಿದ್ದಾರೆ. ■